# ಕನ್ನಡ ಸಾಹಿತ್ಯ ಪರಿಷತ್ತು(ನೋಂ)

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪, ೨೨೪೨೩೮೬೭, ೨೬೬೭೨೯೯೨

http://www.kasapa.in e-mail : kannadaparishattu@gmail.com

ಸ್ಥಾಪನೆ : ೧೯೧೫


ದಿನಾಂಕ : ೧೭-೧೦-೨೦೨೫

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ-ನಿಬಂಧನೆಗಳು (೩೦)ರ ಪ್ರಕಾರ ಕರೆದಿರುವ

## ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆಯ ಪತ್ರ – ಜಮಖಂಡಿ, ದಿನಾಂಕ : ೦೯-೧೧-೨೦೨೫

ವಿಷಯ : ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿಗಳು, ೨ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಇವರ ಆದೇಶ ಸಂಖ್ಯೆ:ಡಿಆರ್‌ಬಿ-೨ ಸಂ.ಸಂ./ದೂರು/೧೨/೨೦೨೫-೨೬, ದಿನಾಂಕ ೨೭-೦೬-೨೦೨೫ ರಂದು ರದ್ದುಪಡಿಸಲಾದ "ವಾರ್ಷಿಕ ಸಾಮಾನ್ಯ ಸಭೆ"ಯನ್ನು ನಡೆಸುವ ಬಗ್ಗೆ.

ಉಲ್ಲೇಖ : ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ ೦೦೨೯೯೧೯/೨೦೨೫ ರ ಮಧ್ಯಂತರ ಆದೇಶ ದಿನಾಂಕ ೨೫-೦೭-೨೦೨೫

೧. ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿಗಳು, ೨ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಇವರು ದಿನಾಂಕ ೨೯-೦೬-೨೦೨೫ರಂದು ಸಂಡೂರಿನಲ್ಲಿ ನಿಗದಿಪಡಿಸಿರುವ ವಾರ್ಷಿಕ ಸಾಮಾನ್ಯ ಸಭೆಯನ್ನು ರದ್ದುಪಡಿಸಿರುವ ಆದೇಶವನ್ನು ಯಥಾವತ್ತಾಗಿ ಉಲ್ಲೇಖಿಸಲಾಗಿದೆ.

> "ದಿನಾಂಕ ೨೯-೦೬-೨೦೨೫ರ ಭಾನುವಾರದಂದು ಏರ್ಪಡಿಸಲಾಗಿದ್ದ ೨೦೨೩-೨೦೨೪ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಗೆ ನಿಗದಿಪಡಿಸಿರುವ ಬಳ್ಳಾರಿ ಜಿಲ್ಲೆಯ ಸಂಡೂರು ಪಟ್ಟಣದ ಕೂಡ್ಲಿಗಿ ರಸ್ತೆಯಲ್ಲಿರುವ ಆದರ್ಶ ಕಲ್ಯಾಣ ಮಂಟಪದ ಸ್ಥಳವು ವಾರ್ಷಿಕ ಸರ್ವಸದಸ್ಯರ ಸಭೆ ನಡೆಸಲು ಸೂಕ್ತವಾಗಿರುವ ಸ್ಥಳವಾಗಿರುವುದಿಲ್ಲ ಎಂದು ತೀರ್ಮಾನಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವಸದಸ್ಯರ ಹಿತದೃಷ್ಟಿಯಿಂದ ದಿನಾಂಕ ೨೯-೦೬-೨೦೨೫ರ ಭಾನುವಾರದಂದು ನಿಗದಿಪಡಿಸಿರುವ ೨೦೨೩-೨೪ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ರದ್ದುಪಡಿಸಿ ಆದೇಶಿಸಿದೆ. ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಮತ್ತು ಸಂಘದ ಉಪನಿಯಮಾನುಸಾರ ಕರ್ನಾಟಕದ ಎಲ್ಲಾ ಜಿಲ್ಲೆಗಳ ಸದಸ್ಯರು ಭಾಗವಹಿಸಲು ಅನುಕೂಲಕರವಾಗಿರುವಂತೆ ಹಾಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿರುವ ಸ್ಥಳದಲ್ಲಿ ಆಯೋಜಿಸುವಂತೆ ನಿರ್ದೇಶಿಸಲಾಗಿದೆ."

೨. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ರ ಅಡಿಯಲ್ಲಾಗಲಿ ಅಥವಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆ ೩೦(೫)ರ ಅಡಿಯಲ್ಲಿಯಾಗಲೀ, ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿಗಳು, ೨ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಇವರಿಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ರದ್ದುಪಡಿಸುವ ಯಾವುದೇ ಅಧಿಕಾರವಿಲ್ಲದಿರುವ ಹಿನ್ನೆಲೆಯಲ್ಲಿ, ಅವರು ನೀಡಿರುವ ದಿನಾಂಕ ೨೭-೦೬-೨೦೨೫ರಂದು ರದ್ದುಪಡಿಸಿ ಆದೇಶ ಹೊರಡಿಸಿರುವುದು ಕಾನೂನು ಬಾಹಿರವಾಗಿದೆ ಹಾಗೂ ಸಾಹಿತ್ಯ ಪರಿಷತ್ತಿನ ನಿಯಮಗಳ ಉಲ್ಲಂಘನೆಯಾಗಿದೆ ಎಂಬ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ರಿಟ್ ಪಿಟಿಷನ್ ೦೦೨೯೯೧೯/೨೦೨೫ ದಾಖಲಿಸಿ ಅವರ ಆದೇಶವನ್ನು ಪ್ರಶ್ನಿಸಿತು. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ ೨೫-೦೭-೨೦೨೫ ಮಧ್ಯಂತರ ಆದೇಶವನ್ನು ಹೊರಡಿಸಿ, ನಿಬಂಧನೆ ೩೦(೫)ರ ಅನ್ವಯ ವಾರ್ಷಿಕ ಸಾಮಾನ್ಯ ಸಭೆ ಮಾಡುವ ಪರಮಾಧಿಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ತೀರ್ಮಾನವೇ ಅಂತಿಮ ಎಂಬ ಆದೇಶ ನೀಡಿರುವ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ:ಡಿಆರ್‌ಬಿ-೨/ಸಂ.ಸಂ./ದೂರು/೧೨/೨೦೨೫-೨೬, ದಿನಾಂಕ ೨೭-೦೬-೨೦೨೫ರಂತೆ ರದ್ದುಪಡಿಸಿದ ಪರಿಷತ್ತಿನ ೧೧೮ನೆಯ ಹಾಗೂ ೨೦೨೩-೨೪ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು, <u>'ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಲ್ಲಹಳ್ಳಿಯ ಸತ್ಯಕಾಮ ಪ್ರತಿಷ್ಠಾನ ಸುಮ್ಮನೆ' ಯಲ್ಲಿ ನಡೆಸಲು ದಿನಾಂಕ ೧೨-೦೯-೨೦೨೫ರಂದು ನೋಟೀಸು ನೀಡಿ, ಅದರಂತೆ ಎಲ್ಲ ವ್ಯವಸ್ಥೆ ಮಾಡಲಾಗಿತ್ತು.</u>

ದಿನಾಂಕ ೦೩-೧೦-೨೦೨೫ರಂದು ಕಲ್ಲಹಳ್ಳಿ ಗ್ರಾಮದಲ್ಲಿ ಎರಡು ಗುಂಪುಗಳ ಮಧ್ಯೆ ಗಲಾಟೆಗಳಾಗಿ ಅಪರಾಧ ಸಂಖ್ಯೆ;೧೩೫/೨೦೨೫, ೧೩೭/೨೦೨೫ರಂತೆಅಪರಾಧ ಪ್ರಕರಣ ದಾಖಲಾಗಿದ್ದು, ಕಲ್ಲಹಳ್ಳಿ ಗ್ರಾಮದಲ್ಲಿ ಬಿಗುವಿನ ವಾತಾವರಣವಿರುವುದರಿಂದ ಮತ್ತು ಆರ್.ಎಸ್.ಎಸ್. ಪಥಸಂಚಲನ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಯೋಜಿಸಿರುವುದರಿಂದ, ವಾರ್ಷಿಕ ಸಾಮಾನ್ಯ ಸಭೆಗೆ ಪೊಲೀಸ್ ಬಂದೋಬಸ್ತ್ ಒದಗಿಸಲು ಸಾಧ್ಯವಾಗದ ಕಾರಣದಿಂದ, ಜಮಖಂಡಿ ತಾಲ್ಲೂಕಿನ ತಹಶಿಲ್ದಾರ್ ಅವರು ತಾಲ್ಲೂಕು **ಕಾರ್ಯನಿರ್ವಾಹಕ ದಂಡಾಧಿಕಾರಿ ಜಮಖಂಡಿ ಭಾರತೀಯ ನಾಗರೀಕ ಸುರಕ್ಷತಾ ಸಂಹಿತೆ ೨೦೨೩ರ ಕಲಂ ೧೬೩ ಬಿ.ಎನ್.ಎಸ್‌ರಡಿಯಲ್ಲಿ ನಿಷೇಧಾಜ್ಞೆ ಹೊರಡಿಸಿರುವ** ಹಿನ್ನೆಲೆಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ಮುಂದೂಡುವಂತಹ ಅನಿವಾರ್ಯತೆ ಒದಗಿ ಬಂದಿದ್ದು, ದಿನಾಂಕ ೦೪-೧೦-೨೦೨೫ರಂದು ಜಮಖಂಡಿಯ ಅನ್ನಪೂರ್ಣೇಶ್ವರಿ ಹೋಟೆಲ್‌ನಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ, ಕಲ್ಲಹಳ್ಳಿಯಲ್ಲಿ ಇನ್ನೂ ಬಿಗುವಿನ ವಾತಾವರಣವಿರುವುದರಿಂದ ಜಮಖಂಡಿಯಲ್ಲಿ ವಾರ್ಷಿಕ ಸಾಮಾನ್ಯ ಸಭೆ ಏರ್ಪಡಿಸಬೇಕೆಂಬ ಪೊಲೀಸ್ ಸಲಹೆಯನ್ನು ಚರ್ಚಿಸಿ, ಅವರ ಸಲಹೆಯನ್ನು ಪರಿಗಣಿಸಿ, ಮುಂದಿನ ಸಭೆಯನ್ನು ಆಯೋಜಿಸಲು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಗಮನಕ್ಕೆ ತಂದು, ನ್ಯಾಯಾಲಯದ ಆದೇಶದಂತೆ ಕಾರ್ಯನಿರ್ವಹಿಸಲು ಹಾಗೂ ನ್ಯಾಯಾಲಯದಲ್ಲಿ ಅಧ್ಯಕ್ಷರು ಉಪಸ್ಥಿತರಿರುವುದರಿಂದ ಈ ಸಂಬಂಧವಾಗಿ ಅವರಿಗೆ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಪುಟ ೨ಕ್ಕೆ............

Scanned with OKEN Scanner

೩. ಈ ಹಿನ್ನೆಲೆಯಲ್ಲಿ ಪರಿಷತ್ತಿನ ೧೦೮ನೆಯ ಹಾಗೂ ೨೦೨೩-೨೪ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ ೦೯-೧೧-೨೦೨೫ರ ಭಾನುವಾರ ಬೆಳಗ್ಗೆ ೧೧.೦೦ ಗಂಟೆಗೆ 'ಮುರಗೋಡ ಕಲ್ಯಾಣ ಮಂಟಪ, ಕುಡಚಿ ರಸ್ತೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ'ಯಲ್ಲಿ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

೪. ಈ ಸಭೆಯಲ್ಲಿ ನಾಡಗೀತೆ, ಸ್ವಾಗತ, ಶ್ರದ್ಧಾಂಜಲಿಯೊಂದಿಗೆ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ, ತೀರ್ಮಾನಿಸಲಾಗುವುದು. ಗೌರವಾನ್ವಿತ ಆಜೀವ ಸದಸ್ಯರುಗಳು ಈ ಸಭೆಗೆ ಹಾಜರಾಗಲು ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ವಿನಂತಿಸಿದೆ.

<u>ಕಾರ್ಯಸೂಚಿ :</u>

ಅ) ದಿನಾಂಕ ೧೦-೩-೨೦೨೪ರಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯಲ್ಲಿ ನಡೆದ ವಾರ್ಷಿಕ / ವಿಶೇಷ ಸಾಮಾನ್ಯ ಸಭೆಯ ನಡವಳಿಗಳ ದೃಢೀಕರಣ.

ಆ) ೨೦೨೩-೨೪ನೆಯ ಸಾಲಿನ ಲೆಕ್ಕಪರಿಶೋಧಿತವಾದ (ಆಡಿಟ್ ಆದ) ವಾರ್ಷಿಕ ಲೆಕ್ಕ ಪತ್ರಗಳ ಮಂಡನೆ.

ಇ) ೨೦೨೪-೨೫ರ ಸಾಲಿನ ವರ್ಷಕ್ಕೆ ಕಾರ್ಯಕಾರಿ ಸಮಿತಿಯು ತಯಾರಿಸಿದ ಪರಿಷತ್ತಿನ ಕಾರ್ಯಚಟುವಟಿಕೆಗಳು, ಕ್ರಿಯಾಯೋಜನೆಗಳು ಹಾಗೂ ವಾರ್ಷಿಕ ಆಯವ್ಯಯವನ್ನು ಚರ್ಚಿಸಿ, ಅನುಮೋದಿಸುವ ಬಗ್ಗೆ

ಈ) ೨೦೨೪-೨೫ರ ಸಾಲಿನ ಹಣಕಾಸಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆ ನಿಗದಿಪಡಿಸುವ ಬಗ್ಗೆ.

ಉ) ಸದಸ್ಯರು ನಿಯಮಾನುಸಾರವಾಗಿ ಕಳುಹಿಸಿರುವ ಇತರೆ ಸೂಚನೆಗಳ ಬಗ್ಗೆ.

ಊ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇದರಲ್ಲಿನ ವ್ಯವಹಾರಗಳ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ರ ಕಲಂ ೨೫ರಡಿ ವಿಚಾರಣೆ ಅಂಗವಾಗಿ ನೀಡಬೇಕಾದ ಮಾಹಿತಿ ದಾಖಲೆ ಹಾಗೂ ಹೇಳಿಕೆಯ ಬಗ್ಗೆ ಚರ್ಚೆ ಹಾಗೂ ಕಸಾಪ ವಿರುದ್ಧ ಬಂದಿರುವ ದೂರುಗಳಿಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಸಮಿತಿ ರಚಿಸಿರುವ ಬಗ್ಗೆ ಚರ್ಚೆ

ಎ) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇನ್ನಿತರೆ ವಿಷಯಗಳ ಕುರಿತು.

ಅಧ್ಯಕ್ಷರ ಭಾಷಣ

ವಂದನಾರ್ಪಣೆ

| (ಡಿ.ಆರ್. ವಿಜಯಕುಮಾರ್) | (ಎಚ್.ಬಿ. ಮದನ್ ಗೌಡ) | (ಬಿ.ಎಂ. ಪಟೇಲ್‌ಪಾಂಡು) |
|---|---|---|
| ಗೌರವ ಕೋಶಾಧ್ಯಕ್ಷರು | ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ |

ಸೂಚನೆಗಳು:

೧. ೨೦೨೩-೨೪ನೇ ಸಾಲಿನ ವಾರ್ಷಿಕ ವರದಿಯನ್ನು ದಿನಾಂಕ ೩೦-೧೦-೨೦೨೫ರಿಂದ ಪರಿಷತ್ತಿನ ಕಚೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ ಅಂಚೆ ವೆಚ್ಚ ರೂ. ೨೦/- ಕಳುಹಿಸಿ ಪಡೆಯಬಹುದಾಗಿದೆ.

೨. ಸಭೆಗೆ ಬರುವ ಕ.ಸಾ.ಪ. ಸದಸ್ಯರು, ಪರಿಷತ್ತಿನ ಗುರುತಿನ ಚೀಟಿ ಅಥವಾ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.

೩. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ವಿಷಯಗಳಿಗೆ ಸದಸ್ಯರುಗಳು ನಿಯಮಾನುಸಾರ ವಿಷಯಗಳನ್ನು ಲಿಖಿತ ರೂಪದಲ್ಲಿ ಸಭೆಯ ದಿನಾಂಕಕ್ಕೆ ಕನಿಷ್ಠ ಎರಡು ವಾರಗಳಿಗೆ ಕಡಿಮೆ ಇಲ್ಲದಷ್ಟು ಮುಂಚಿತವಾಗಿ ಅಧ್ಯಕ್ಷರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು - ಇವರಿಗೆ ಕಳುಹಿಸಿಕೊಡುವುದು. ತದನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

೪. ಕ.ಸಾ.ಪ. ನಿಬಂಧನೆ ಸಂಖ್ಯೆ ೩೦(೬)ರಂತೆ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಈ ಸಭೆಯನ್ನು ನಿಗದಿಗೊಳಿಸಿದ ದಿನಾಂಕಕ್ಕಿಂತ ಕನಿಷ್ಠ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಸಾಮಾಜಿಕ ಜಾಲತಾಣ-https://kannadasahithyaparishattu.in ಅಥವಾ http://kasapa.in /ಮೊಬೈಲ್ ಆ್ಯಪ್/ಪತ್ರದ ಮೂಲಕ ಪ್ರಕಟಿಸಿ ಜಾರಿಗೊಳಿಸಲಾಗಿದೆ ಹಾಗೂ ಸಭಾ ಸೂಚನಾ ಪತ್ರದ ಪ್ರತಿಯನ್ನು ಪರಿಷತ್ತಿನ ಎಲ್ಲ ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಯಾವುದೇ <u>ಸಂದರ್ಭದಲ್ಲಿ ಯಾವುದೇ ಸದಸ್ಯರಿಗೆ ಸೂಚನಾ ಪತ್ರ ಅವರ ಗಮನಕ್ಕೆ ಬಂದಿರಲಿಲ್ಲ ಎನ್ನುವ ಕಾರಣ ಮಾತ್ರಕ್ಕೆ ಸಭೆಯನ್ನು ಅಸಿಂಧು ಎಂದು ಪರಿಗಣಿಸತಕ್ಕದ್ದಲ್ಲ.</u>

೫. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯಯಲ್ಲಿ ಅನುಮೋದನೆಗೊಂಡ ನಿರ್ಣಯದಂತೆ ಸಭೆಯನ್ನು ಝೂಮ್ (ಆನ್‌ಲೈನ್) ಮೀಟಿಂಗ್ ಮುಖಾಂತರ ಮಾಡಲಾಗುವುದು. ಸಭೆಗೆ ಹಾಜರಾಗಲು ಸಾಧ್ಯವಾಗದ ಆಜೀವ ಸದಸ್ಯರು ಝೂಮ್ ಮೀಟಿಂಗ್‌ನಲ್ಲಿ ಭಾಗವಹಿಸಬಹುದಾಗಿದೆ. (link:https://us06web.zoom.us/j/83435900972?pwd=LQYZHJn4dbsce7DqHxTtaf0dEnB1oN.1 Meeting ID: 834 3590 0972 Passcode: 461152)

೬. ಪರಿಷತ್ತಿನ ಘನತೆ-ಗೌರವ ಕಾಪಾಡುವ ಹಿನ್ನೆಲೆಯಲ್ಲಿ ಯಾರೂ ಏರುಧ್ವನಿಯಲ್ಲಿ ಮಾತನಾಡಬಾರದು, ಶಾಂತಿಯುತವಾಗಿ, ಕ್ರಮಬದ್ಧವಾಗಿ, ಶಿಸ್ತುಬದ್ಧವಾಗಿ ನಡೆದುಕೊಳ್ಳುವುದು. ಸಭೆಗೆ ಅಡಚಣೆ, ಅಡೆತಡೆ ಮಾಡಿದಲ್ಲಿ ನ್ಯಾಯಾಲಯದ ಗಮನಕ್ಕೆ ತರಲಾಗುವುದು.

೭. ಪರಿಷತ್ತಿನ ಘನತೆ-ಗೌರವ ಕಾಪಾಡುವ ಹಿನ್ನೆಲೆಯಲ್ಲಿ ಸಭೆಯಲ್ಲಿ ಆಡಿಯೋ-ವಿಡಿಯೋಗಳನ್ನು ಚಿತ್ರೀಕರಣ ಮಾಡುವಂತಿಲ್ಲ, ಛಾಯಾಚಿತ್ರಗಳನ್ನು ತೆಗೆಯುವಂತಿಲ್ಲ.

<u>ವಿಶೇಷ ಸೂಚನೆ : ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ</u>

೧. ಶ್ರೀ ಶಿವಾನಂದ ಶೆಲ್ಲಿಕೇರಿ, ಅಧ್ಯಕ್ಷರು, ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೭೩೧೯೫೨೭೧
೨. ಶ್ರೀ ಹಾಸಿಂಪೀರ್ ವಾಲಿಕಾರ್, ಅಧ್ಯಕ್ಷರು, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೮೦೩೫೭೭೫
೩. ಶ್ರೀ ಜಿ.ಕೆ. ತಳವಾರ, ಪರಿಶಿಷ್ಟ ಪಂಗಡ ಪ್ರತಿನಿಧಿ, ಕೇಂದ್ರ ಕಾರ್ಯಕಾರಿ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೫೩೮೨೪೭೫೦೮
೪. ಶ್ರೀ ಸಿದ್ಧರಾಮ ಶಿರೋಳ, ಗೌರವ ಕಾರ್ಯದರ್ಶಿ, ಬಾಗಲಕೋಟೆ ಜಿಲ್ಲಾ ಕ.ಸಾ.ಪ., ಮೊ. ೯೯೦೨೭೪೮೮೨೫
೫. ಶ್ರೀ ಚಂದ್ರಶೇಖರ ಕಾಳನ್ನವರ, ಗೌರವ ಕಾರ್ಯದರ್ಶಿ, ಬಾಗಲಕೋಟೆ ಜಿಲ್ಲಾ ಕ.ಸಾ.ಪ., ಮೊ. ೯೪೮೧೭೨೬೧೪೪
೬. ಶ್ರೀ ಸಂತೋಷ ಕಲ್ಲಪ್ಪ ತಳಕೇರಿ, ಅಧ್ಯಕ್ಷರು, ಜಮಖಂಡಿ ತಾಲ್ಲೂಕು, ಕ.ಸಾ.ಪ. ಮೊ. ೯೮೮೬೬೬೪೪೦
೭. ಶ್ರೀ ಬಿ.ಎಂ. ಪಟೇಲ್‌ಪಾಂಡು, ಗೌರವ ಕಾರ್ಯದರ್ಶಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೭೩೧೮ ೨೨೩೧೧
೮. ಶ್ರೀ ಎಚ್.ಬಿ. ಮದನ್ ಗೌಡ, ಗೌರವ ಕಾರ್ಯದರ್ಶಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೮೮೦೧೯೯೦೧೯
೯. ಶ್ರೀ ಡಿ.ಆರ್. ವಿಜಯ ಕುಮಾರ್, ಗೌರವ ಕೋಶಾಧ್ಯಕ್ಷರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೮೦ ೩೩೧೭೪
೧೦. ಶ್ರೀ ಪಾರ್ಶ್ವನಾಥ, ವ್ಯವಸ್ಥಾಪಕರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೯೦೧೦ ೫೯೮೮

Scanned with OKEN Scanner